* * *

ಕವಿವಿಯವರು ಪ್ರತಿ ವರ್ಷ ಬೇಂದ್ರೆಯವರ ಸ್ಮರಣಾರ್ಥ ಪ್ರಸಾರಾಂಗದ ವತಿಯಿಂದ 'ಕವಿದಿನ' ಆಚರಿಸುತ್ತಾರೆ. ಬೇಂದ್ರೆಯವರನ್ನು ಅಧ್ಯಯನ ಮಾಡಿದ ನಾಡಿನ ವಿದ್ವಾಂಸರೊಬ್ಬರನ್ನು ಆಹ್ವಾನಿಸುತ್ತಾರೆ. ಈ ಸಲ ನಾಡಿಗನನ್ನು ಆಮಂತ್ರಿಸಲಾಗಿತ್ತು (1994 ಜನವರಿ 31). ಅವನು ಬೆಂಗಳೂರು ವಿವಿಯಿಂದ ಬೇಂದ್ರೆ ಕುರಿತು ಮೌಲಿಕ ಚಿಂತನೆಯ ಪ್ರಥಮ ಸಂಶೋಧನ ಪ್ರಬಂಧ (1985) ಮಂಡಿಸಿದ್ದ. ಆ ಕೃತಿ ಈಗಾಗಲೇ (1989) ಪುಸ್ತಕರೂಪವಾಗಿ ಪ್ರಕಟವಾಗಿತ್ತು. ನಾಡಿನಲ್ಲಿ ಬೇಂದ್ರೆ ಬಗ್ಗೆ ನಿರರ್ಗಳವಾಗಿ ಮಾತಾಡಬಲ್ಲ, ಚರ್ಚಿಸಬಲ್ಲ ವಿದ್ವಾಂಸನೆಂದು ಹೆಸರಾಗಿದ್ದ. 'ಬೇಂದ್ರೆಯವರ ಸಖೀಗೀತದಲ್ಲಿ ಋತುವರ್ಣನೆ' ಕುರಿತು ಅಂದಿನ ಅವನ ವ್ಯಾಖ್ಯಾನವೂ ಅಧ್ಯಯನಪೂರ್ಣವಾಗಿತ್ತು. ಕವಿವಿಗೆ ಬಂದ ಅತಿಥಿಗಳನ್ನು, ಯಾವುದೇ ಅತಿರಿಕ್ತ ಪ್ರಯಾಣವೆಚ್ಚ, ಪ್ರಯಾಸವಿಲ್ಲದೇ ಬೇಂದ್ರೆ ಪ್ರತಿಷ್ಠಾನಕ್ಕೆ ಆಮಂತ್ರಿಸುವ ಪರಿಪಾಟಿಯೂ ನಡೆಯಿತು.

ನಾಡಿಗನಿಗೆ 'ಬೇಂದ್ರೆ ಪ್ರತಿಷ್ಠಾನ'ದ ಪ್ರಶಸ್ತಿ ಕೊನೆಯವರೆಗೂ ಸಿಗಲಿಲ್ಲ; ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕೆಲವು ವರ್ಷ ನಾನೂ ಇದ್ದೆ, ಪ್ರತಿ ಸಲ ಸುಮತಿಯ ಹೆಸರು ಸೂಚಿಸುತ್ತಿದ್ದೆ, ಆದರೆ ಸಂಸ್ಥೆಯ ಕೆಲವು ಪ್ರಭಾವಿಗಳು ಕೊನೆಯವರೆಗೂ ನಾಡಿಗನನ್ನು ಪರಿಗಣಿಸಲು ಒಪ್ಪಲಿಲ್ಲ. ಕನ್ನಡ ಪರಿಸರದ ಅನೇಕ ಅಕಾರಣ ಅಸೂಯಾ ಅತೃಪ್ತಿ ಸಾಹಿತ್ಯ ರಾಜಕಾರಣಗಳಲ್ಲಿ ಇದೂ ಒಂದಾಗಿತ್ತು. ಬೇಂದ್ರೆಯವರ ಅನೇಕ ಕನ್ನಡ ಕವಿತೆಗಳ ಮೂಲದಲ್ಲಿದ್ದ ಮರಾಠೀ ಮತ್ತು ಕೊಂಕಣಿ ಕವಿತೆಗಳನ್ನು ಮೂಲಸಹಿತ ಉದಾಹರಿಸಿದ್ದು, ಸಟೀಕ ವಿಮರ್ಶಿಸಿದ್ದು ಬಹುಶಃ ಪ್ರತಿಷ್ಠಾನದ ಕೆಲವರ ದೃಷ್ಟಿಯಲ್ಲಿ ದೋಷವಾಗಿ ಕಂಡಿತ್ತು. ಮರಾಠೀ ಮತ್ತು ಕೊಂಕಣಿಗಳನ್ನು ಅರಿತಿದ್ದ ಶಂಬಾ ಜೋಶಿ, ಅ.ರಾ. ತೋರೊ, ಸುಮತೀಂದ್ರ ನಾಡಿಗರಂಥ ನಿಷ್ಪಕ್ಷ ಸೂಕ್ಷ್ಮಜ್ಞರು ಮಾತ್ರ ಬರೆಯಬಹುದಾದಂಥ ವಿಮರ್ಶೆ ನಾಡಿಗನ ಅಧ್ಯಯನದಲ್ಲಿತ್ತು.

* * *

ಸುಮತೀಂದ್ರ ನಾಡಿಗ 'ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ'ದ ಚೇರ್‌ಮನ್ (1996-1999) ಆಗಿ ನೇಮಕಗೊಂಡು ಪೂರ್ಣಾವಧಿ ಕೆಲಸ ಮಾಡಿದ ಮೊದಲ ಕನ್ನಡಿಗ. ಈ ಮೊದಲು ನೇಮಕಗೊಂಡಿದ್ದ ಅನಂತಮೂರ್ತಿ ಒಂದೇ ವರ್ಷವಿದ್ದು ಸಾಹಿತ್ಯ ಅಕಾದೆಮಿಗೆ ಹೋಗಿದ್ದರು. ಎಂ.ಎನ್. ರಾಯ್ ಅನುಯಾಯಿಯಾಗಿದ್ದ ಎಸ್.ಆರ್. ಬೊಮ್ಮಾಯಿ ಅವರು ತಮ್ಮಂತೆ ರಾಯ್ ಅಭಿಮಾನಿ ಸ್ನೇಹಿತರನ್ನು ವಿವಿಧ ಇಲಾಖೆಗಳಿಗಾಗಿ ಹುಡುಕಿಕೊಳ್ಳುತ್ತಿದ್ದರು. ಮುಂಬಯಿಯಲ್ಲಿ ಕಲಿಯುತ್ತಿದ್ದ, ದುಡಿಯುತ್ತಿದ್ದ ದಿನಗಳಿಂದ ಸುಮತೀಂದ್ರ ನಾಡಿಗ, ಶಾಂತಿನಾಥ ದೇಸಾಯಿ, ಬೊಮ್ಮಾಯಿ, ನೀಲೆಕಣಿ, ಆಮೂರ ಮುಂತಾದವರು 'ರಾಯಿಸ್ಟ್ ಬಳಗ'ದ ಕನ್ನಡ ಸದಸ್ಯರಾಗಿದ್ದವರು. ಬೊಮ್ಮಾಯಿ ಅವರ 'ರಾಯಿಸ್ಟ್ ಬಳಗ'ದ ಆಪ್ತತೆಯಿಂದ ಸಾಹಿತಿ, ಪ್ರಕಾಶನ ಪ್ರಪಂಚವನ್ನು ತಿಳಿದಿದ್ದ, ಕನ್ನಡಿಗನಾಗಿದ್ದ ಸುಮತೀಂದ್ರ ನಾಡಿಗ ಈಗ ಎನ್‌ಬಿಟಿ ಚೇರ್‌ಮನ್ ಆಗಿದ್ದ.

ನಾನು ಕೇಂದ್ರೀಯ ಹಿಂದೀ ಶಿಕ್ಷಣ ಮಂಡಲದ ಸದಸ್ಯನಾಗಿದ್ದೆ. ಮಂತ್ರಿಯವರ ಕೊಠಡಿಯಲ್ಲಿ ಪರಿಚಯದ ಸಭೆ, ನಂತರ ಅಧಿಕೃತ ವಿಷಯಸೂಚಿ ಸಭೆ ನಡೆದುವು (1996 ನವಂಬರ್ 20). ಆಗ್ರಾದ ಹಿಂದೀ ಸಂಸ್ಥಾನ್‌ದಲ್ಲಿ ಕೆಲ ಕಾಲ ಕಲಿತಿದ್ದ ನನ್ನ ಅನುಭವಗಳು ಈಗ ನೆರವಾದುವು. ನನ್ನ ಆತ್ಮವಿಶ್ವಾಸ ಮತ್ತು ಭಾಷೆ, ವಿಷಯದ ಕುರಿತ ಪೂರ್ವಸಿದ್ಧತೆಗಳು ಕೈ ಹಿಡಿದುವು. ಸಭೆಯ ನಂತರ ಬೊಮ್ಮಾಯಿಯವರ ಕಾರ್ಯದರ್ಶಿ ವಿ.ಪಿ. ಬಳಿಗಾರರ ಆಪ್ತ ಕೊಠಡಿಯಲ್ಲಿ ಕುಳಿತು, ಮೋಹನ್ ರಾಕೇಶ್ ಪತ್ನಿ ಅನೀತಾ ರಾಕೇಶ್ ಅವರಿಗೆ ಫೋನಿಸಿದೆ. ಮರುದಿನ ಎಲ್ಲಿಯಾದರೂ ಕೂಡೋಣ ಎಂದು ಸ್ಥಳ-ಸಮಯ ಹೊಂದಿಸಿಕೊಂಡೆವು. ಅದೇ ಹೊತ್ತಿಗೆ, ಅನಿರೀಕ್ಷಿತವಾಗಿ ನಾಡಿಗನ ಫೋನ್ ಬಂತು. ಅಂದು ಸಂಜೆ ಬಳಿಗಾರ ತಮ್ಮ ಮನೆಯಲ್ಲಿ ನನ್ನನ್ನು ಊಟಕ್ಕೆ ಕರೆದೊಯ್ಯಲಿದ್ದರು. ನಾಡಿಗ ತಾನು ಅಲ್ಲಿಗೇ ಬರುವುದಾಗಿ ಹೇಳಿದ. ನಾನು ಸಂಸ್ಥಾನ್ ಸಭೆಗೆಂದು ಬರಲಿದ್ದುದು ಬಳಿಗಾರರಿಂದ ನಾಡಿಗನಿಗೆ ತಿಳಿದಿತ್ತು. ಅವರಲ್ಲಿ ಆಗಾಗ ಮಾತುಕತೆ ನಡೆಯುತ್ತಿದ್ದುವು. ನನಗೆ ಇದೆಲ್ಲ ತಿಳಿದು ಆನಂದವೇ ಆಯಿತು. ದಿಲ್ಲಿಯಲ್ಲಿಯೂ ನನಗೆ ಮತ್ತೊಂದು ನೆಲೆ ಸಿಕ್ಕಂಥ ಹೆಮ್ಮೆ.

ಮರುದಿನ ಮಧ್ಯಾಹ್ನ ನಾನು, ನಾಡಿಗ ಅವನ ಪ್ರೀತಿಯ ಕರ್ನಾಟಕ ರೆಸ್ಟಾರಂಟ್‌ದಲ್ಲಿ ಊಟ